ಇತ್ಯಾದಿಗಳಿಗಾಗಿ ಸಮಾಲೋಚಕರನ್ನು ಪೂರ್ವಾರ್ಹತೆಗೊಳಿಸುವ ಸಲುವಾಗಿ ದಿನಾಂಕ:25–10–2014 ರಂದು Global expression of Interest ಅನ್ನು ಆಹ್ವಾನಿಸಿದ್ದು, ಕೆಳಕಂಡ 5 ಸಮಾಲೋಚಕರಿಂದ ಪ್ರಸ್ತಾವನೆ ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿರುತ್ತದೆ.

1. M/s WAPCOS limited & DHI (India)Water & Evironmental Pvt Ltd.
2. M/s SNC-Lavalin Engineering India Pvt.Ltd.
3. M/s Ramboll(Danmark)A/S.
4. M/s EI technologies Pvt.Ltd &
5. M/s Tahal Consulting Engineers Limited.

ಪೂರ್ವಾರ್ಹತೆಗೊಳ್ಳುವ ಸಮಾಲೋಚಕರಿಂದ ವಿವರವಾದ ಯೋಜನಾ ವರದಿಯನ್ನು ತಯಾರಿಸಿದ ನಂತರ ಮುಂದಿನ ವಿಧಿವಿಧಾನಗಳನ್ನು ಅಂತಿಮಗೊಳಿಸಲಾಗುವುದು. ಈ ಯೋಜನೆಗೆ ಸಲ್ಲಿಸಿರುವ Pre qualification ಪ್ರಸ್ತಾವನೆಗಳನ್ನು ಪರಿಶೀಲಿಸಲಾಗುತ್ತಿದ್ದು, ಅರ್ಹ ಸಂಸ್ಥೆಗೆ RFD Document ಅನ್ನು ನೀಡುವ ಸಮಯದಲ್ಲಿ ಕಾಲಮಿತಿಯ ಬಗ್ಗೆ ತೀರ್ಮಾನಿಸಲಾಗುವುದು.

ಖಾಸಗಿ ಸಂಸ್ಥೆಯಿಂದ 11ಇ ನಕ್ಷೆ ಅಳತೆ ಯೋಜನೆಯ ವಿವರ

3096 (4080); ಶ್ರೀ ಭೂಸನೂರ ರಮೇಶ್ ಬಾಳಪ್ಪ (ಸಿಂಧಗಿ)

ಅ) ವಿಜಯಪುರ ಜಿಲ್ಲೆಯಲ್ಲಿ ಪ್ರಾಯೋಗಿಕವಾಗಿ ಖಾಸಗಿ ಸಂಸ್ಥೆಯ ಮೂಲಕ 11ಇ ನಕ್ಷೆ ಅಳತೆ ಮಾಡಿಸಿದ ಯೋಜನೆಯು ಯಾವ ಹಂತದಲ್ಲಿದೆ (ವಿವರವಾದ ಮಾಹಿತಿ ಒದಗಿಸುವುದು)

ಆ) ಹಾಗಿದ್ದಲ್ಲಿ, ಪ್ರಾಯೋಗಿಕ ಯೋಜನೆಯಲ್ಲಿ ಅಳತೆ ಮಾಡಿದ ಖಾಸಗಿ ಸಂಸ್ಥೆಯವರು, ರೈತರು ಸಲ್ಲಿಸಿದ 11ಇ ಮತ್ತು ಪೋಡಿ ಅರ್ಜಿಗಳನ್ನು

ಅಳತೆ ಮಾಡಲು ಮುಂದೆ ಬಂದಿದ್ದಾರೆಯೇ; ಯಾವ ಯಾವ ಸಂಸ್ಥೆಯವರು ಬಂದಿದ್ದಾರೆ (ಮಾಹಿತಿ ಒದಗಿಸುವುದು);

ಇ) ಖಾಸಗಿ ಸಂಸ್ಥೆಯವರು ಮುಂದೆ ಬಂದಿದ್ದರೆ, ಸದರಿ ಯೋಜನೆಯನ್ನು ಮುಂದುವರೆಸಿ ರೈತರು ಸಲ್ಲಿಸಿದ ಅರ್ಜಿಗಳನ್ನು ಶೀಘ್ರ ವಿಲೇವಾರಿ ಮಾಡಲು ಸರ್ಕಾರ ಕ್ರಮ ಕೈಗೊಂಡಿದೆಯೇ;

ಈ) ಹಾಗಿದ್ದಲ್ಲಿ, ಸರ್ಕಾರ ಈವರೆವಿಗೂ ಕ್ರಮ ಕೈಗೊಳ್ಳದಿರಲು ಕಾರಣಗಳೇನು ಹಾಗೂ ಯಾವಾಗ ಕ್ರಮ ಕೈಗೊಳ್ಳುವುದು?

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

ಅ) ವಿಜಯಪುರ ಜಿಲ್ಲೆಯಲ್ಲಿ ಬಾಕಿ ಇರುವ ಪೋಡಿ ಕಡತಗಳ ವಿಲೇವಾರಿಗಾಗಿ ಖಾಸಗಿ ಸಂಸ್ಥೆಯನ್ನು ಬಳಸಿಕೊಳ್ಳಲು ಪ್ರಾಯೋಗಿಕವಾಗಿ ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಅಳವಡಿಸಿದ್ದು ಖಾಸಗಿ ಸಂಸ್ಥೆಯಾದ ಭೂಮಿ ಪ್ರೈ.ಲಿ., ರವರು 102 ಅರ್ಜಿಗಳ ಅಳತೆ ಕಾರ್ಯ ಮಾಡಿರುತ್ತಾರೆ. ತಾಲ್ಲೂಕಿನ ಉಳಿದ ಅರ್ಜಿಗಳು ಹಾಗೂ ಉಳಿದ ತಾಲ್ಲೂಕುಗಳಲ್ಲಿ ಬಾಕಿ ಇರುವ ಅರ್ಜಿಗಳನ್ನು ಖಾಸಗಿ ಸಂಸ್ಥೆಯಿಂದ ಅಳತೆ ಮಾಡಿಸಲು ಟೆಂಡರ್ ಪ್ರಕ್ರಿಯೆ ನಡೆಸಲು ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

ಆ) ಖಾಸಗಿ ಸಂಸ್ಥೆಯಾದ ಭೂಮಿ ಪ್ರೈ.ಲಿ., ರವರು ಮಾತ್ರ ಬಸವನ ಬಾಗೇವಾಡಿ ತಾಲ್ಲೂಕಿನಲ್ಲಿ ಅಳತೆ ಮಾಡಿದ್ದು ಉಳಿದ ಅರ್ಜಿಗಳು ಹಾಗೂ ಉಳಿದ ತಾಲ್ಲೂಕುಗಳಲ್ಲಿ ಬಾಕಿ ಇರುವ ಅರ್ಜಿಗಳನ್ನು ಅಳತೆ ಮಾಡಲು ಸದರಿ ಸಂಸ್ಥೆಯವರೇ ಮುಂದೆ ಬಂದಿರುತ್ತಾರೆ.

ಇ) ಖಾಸಗಿ ಸಂಸ್ಥೆಯಿಂದ ಅಳತೆ ಮಾಡಿಸುವ ಬಗ್ಗೆ ಪ್ರಸ್ತಾವನೆ ಬಂದಲ್ಲಿ, ಪರಿಶೀಲಿಸಿದ ನಂತರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಈ) ಅನ್ವಯಿಸುವುದಿಲ್ಲ.